ಶ್ರೀ ಪಿ. ಜಿ. ಆರ್. ಸಿಂಧ್ಯ : ಅಚ್ಚುಕಟ್ಟು ಪ್ರದೇಶದ ಮಂತ್ರಿಗಳು ಏಕೆ ಬಂದಿಲ್ಲ ಸ್ವಾಮಿ. ಅವರ ಆಪ್ತ ಕಾರ್ಯದರ್ಶಿಗಳನ್ನು ಏನೋ ಅರೆಸ್ಟ್ ಮಾಡಿದ್ದಾರೆಂದು ಪೇಪರ್‌ನಲ್ಲಿ ಬಂದಿದೆ ಅದಕ್ಕೆ ಸಂಬಂಧಪಟ್ಟಂತೆ ಬಂದಿಲ್ಲವೇ? ಅವರು ತಮಗೆ ಏನಾದರೂ ತಿಳಿಸಿದ್ದಾರೆಯೇ?

ಅಧ್ಯಕ್ಷರು : ಲೆಟರ್ ಕಳಿಸಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್ : ಅವರ ಮಗನ ಮದುವೆ ಇದೆ.

ವಿಷಯ : ಯಗಚಿ ನೀರಾವರಿ ಪ್ರದೇಶದಲ್ಲಿ ಏತ ನೀರಾವರಿ ಯೋಜನೆಗಳು.

Q : 1717

ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಗಚಿ ನದಿಗೆ ಅಡ್ಡಗಟ್ಟೆ ಕಟ್ಟುವುದರಿಂದ ಒಟ್ಟು ಎಷ್ಟು ಎಕರೆ ಭೂಮಿ ನೀರಾವರಿಗೆ ಒಳಗಾಗುತ್ತದೆ ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ?

ಆ) ಯಗಚಿ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಎಷ್ಟು ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದೆ ಮತ್ತು ಅವುಗಳಿಂದ ನೀರಾವರಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶವೆಷ್ಟು?

ಇ) ಏತ ನೀರಾವರಿ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಯಗಚಿ ನದಿಗೆ ಅಡ್ಡಗಟ್ಟೆ ಕಟ್ಟುವುದರಿಂದ ಒಟ್ಟು 53,000 ಎಕರೆ ಭೂಮಿ ನೀರಾವರಿಗೆ ಒಳಗಾಗುತ್ತದೆ. ಇದರ ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ.

1.	ಬೇಲೂರು	6680 ಎಕರೆ
2.	ಆಲೂರು	2400 ಎಕರೆ
3.	ಹಾಸನ	36190 ಎಕರೆ
4.	ಹೊಳೆನರಸೀಪುರ	7730 ಎಕರೆ
	ಒಟ್ಟು	53000 ಎಕರೆ

ಆ) ಯಗಚಿ ಅಚ್ಚುಕಟ್ಟು ಪ್ರದೇಶದಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು ಹಾಗೂ ಅವುಗಳಿಂದ ನೀರಾವರಿ ಆಗುವ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣಗಳು ಈ ಕೆಳಕಂಡಂತಿದೆ.

1. ಆಂಜನೇಯಪುರ ಏತ ನೀರಾವರಿ ಯೋಜನೆ. 14,904 ಎಕರೆ

2. ಕಾಮಸಮುದ್ರ ಏತ ನೀರಾವರಿ ಯೋಜನೆ. 7,670 ಎಕರೆ

ಒಟ್ಟು 22,574 ಎಕರೆ

ಇ) 1) <u>ಆಂಜನೇಯಪುರ ಏತ ನೀರಾವರಿ ಯೋಜನೆ :</u>
ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಕಾಲುವೆಗಳ ವಿವರವಾದ ಸರ್ವೇ ಕಾರ್ಯ ಪ್ರಗತಿಯಲ್ಲಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮೊದಲ ಹಂತವಾಗಿ ಆಗಮನ ಕಾಲುವೆ, ಜಾಕ್‌ವೆಲ್ ವಿತರಣಾ ತೊಟ್ಟಿ ಇನ್ನಿತರೆ ಸಿವಿಲ್ ಕಾಮಗಾರಿಯನ್ನು ಇಲಾಖಾವತಿಯಿಂದ ಕೂಡಲೇ ತೆಗೆದುಕೊಳ್ಳಲಾಗುವುದು.

2) <u>ಕಾಮಸಮುದ್ರ ಏತ ನೀರಾವರಿ ಯೋಜನೆ :</u>
ಮೊದಲನೇ ಹಂತದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಇನ್‌ಟೇಕ್ ಕಾಲುವೆ ಹೆಡ್‌ರೆಗ್ಯುಲೇಟರ್ ಇನ್‌ಟೇಕ್ ಕಾಲುವೆಯ ಅಪ್ರೋಚ್ ಜಾಕ್‌ವೆಲ್ - ಕಮ್ - ಪಂಪಾಸ್ ಮುಗಿದಿರುತ್ತದೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಯಗಚಿ ಅಚ್ಚುಕಟ್ಟು ಪ್ರದೇಶ 53 ಸಾವಿರ ಎಕರೆ ಇದ್ದು ಈ ಪ್ರದೇಶದಲ್ಲಿ ಈಗಾಗಲೇ 22,574 ಎಕರೆಗೆ ಏತ ನೀರಾವರಿ ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಇದರ ಜೊತೆಗೆ ಆ ಯಗಚಿ ಪ್ರದೇಶಕ್ಕೆ ಏನಾದರೂ ಬೇರೆ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡತಕ್ಕ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಎರಡನೆಯದಾಗಿ ಇಲ್ಲಿ ಉಳಿಯತಕ್ಕಂಥ ನೀರನ್ನು ಏನಾದರೂ ಕೃಷ್ಣಾ ಬೇಸಿನ್‌ಗೆ ವರ್ಗ ಮಾಡಲಿಕ್ಕೆ ಅವಕಾಶ ಇದೆಯೇ? ಇವರ ಬಗ್ಗೆ ಸರ್ಕಾರದ ಚಿಂತನೆ ಇದೆಯೇ ? ಮೂರನೆಯದು, ಈ ನೀರನ್ನು ಬೇರೆ ಕಡೆಗೆ ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಏನಾದರೂ ಪ್ರಸ್ತಾವನೆಗಳು ಬರೆದಿದೆಯೇ?

ಶ್ರೀ ಎಸ್. ಎಂ. ಕೃಷ್ಣ : ಯಗಚಿ ನದಿಗೆ ಅಡ್ಡಲಾಗಿ ಬೇಲೂರು ತಾಲ್ಲೂಕಿನಲ್ಲಿ ಒಂದು ಚಿಕ್ಕ ಬ್ಯಾಡಗಿ ಗ್ರಾಮದಲ್ಲಿ ಒಂದು ಅಣೆಕಟ್ಟು ಕಟ್ಟಿಸಿ 53 ಸಾವಿರ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವಂತಹ ಗವರ್ನಮೆಂಟ್ ಆರ್ಡರ್ ಆಗಿದೆ. ಈಗ ಇದರಲ್ಲಿ 2-3 ನೀರಾವರಿ ಯೋಜನೆಗಳು ಕೂಡ ನಮೂದಿತ ಆಗಿದೆ. ಒಂದು ಆಂಜನೇಯಪುರದ ಏತ ನೀರಾವರಿ ಯೋಜನೆ ಇನ್ನೊಂದು ಕಾಮಸಮುದ್ರ ಏತ ನೀರಾವರಿ ಯೋಜನೆ. ಇದರಲ್ಲಿ ನಮ್ಮ ಇವತ್ತಿನ ಮಾಹಿತಿ ಪ್ರಕಾರ ಬೇಲೂರು ತಾಲ್ಲೂಕಿನಲ್ಲಿ 6680 ಎಕರೆ, ಹನೂರ್ ತಾಲ್ಲೂಕಿನಲ್ಲಿ 2400 ಎಕರೆ. ಹಾಸನ ತಾಲ್ಲೂಕಿನಲ್ಲಿ 36,190 ಎಕರೆ ಹಾಗೂ ಹೊಳೆನರಸೀಪುರದಲ್ಲಿ 7,730 ಎಕರೆಗಳಷ್ಟಾಗಿದೆ. ನಿಮ್ಮ ಎರಡನೆಯ ಪ್ರಶ್ನೆ, ಒಂದು ಜಲಾನಯನ ಪ್ರದೇಶದಿಂದ ಮತ್ತೊಂದು ಜಲಾನಯನ ಪ್ರದೇಶಕ್ಕೆ ನೀರನ್ನು ತೆಗೆದುಕೊಂಡು ಹೋಗಬಹುದೇ? ಎಂದು ಕೇಳಿದ್ದೀರಿ. ನಾರ್ಮ್ಸ್ ಪ್ರಕಾರ ಅದು ಸಿಂಧುವಲ್ಲ.

ಶ್ರೀ ಬಿ. ಶಿವರಾಮು : ನಾನು ಈ ಪ್ರಶ್ನೆ ಕೇಳತಕ್ಕಂಥ ಪ್ರಮುಖ ಉದ್ದೇಶವೇನೆಂದರೆ,

ಈಗ ಸರ್ಕಾರದ ಮುಂದೆ ನನ್ನದೊಂದು ಪ್ರಸ್ತಾವನೆ ಇದೆ. ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ಈ ಒಂದು ಪ್ರಸ್ತಾವನೆ ಯಾವ ಹಂತದಲ್ಲಿದೆ? ಮತ್ತು ಈ ಯಗಚಿ ಅಚ್ಚುಕಟ್ಟು ಪ್ರದೇಶ ಏನಿದೆ, ಈ ಎರಡು ಮಂಜೂರಾತಿಯಾಗದೆ ಇನ್ನೊಂದಕ್ಕೆ ಮಂಜೂರಾತಿ ಕೊಡತಕ್ಕಂಥ ಅವಕಾಶವಿರುವುದರಿಂದ ಮತ್ತು ತಾವು ಹೇಳಿದ 22,000 ಎಕರೆಯಲ್ಲಿದೆ. 30,000 ಎಕರೆಗಳವರೆಗೂ ಹೆಚ್ಚಿಗೆ ನೀರು ಅಲ್ಲಿ ಉಳಿಯುತ್ತದೆ . ಆದುದರಿಂದ , ಯಾವ ಕ್ಷೇತ್ರಗಳಲ್ಲಿ ಸತತವಾಗಿ ಬರಗಾಲ ಬಂದು ನೀರಿನ ವ್ಯವಸ್ಥೆಯಿಲ್ಲದೆ ಕೆಟ್ಟ ಪರಿಸ್ಥಿತಿಯಲ್ಲಿದೆಯೋ ಅಂತಹ ಕ್ಷೇತ್ರಗಳಿಗೆ ಉಳಿಯತಕ್ಕಂಥ ನೀರನ್ನು ಒದಗಿಸಬಹುದು. ಈ ದಿಸೆಯಲ್ಲಿ ಸಂಬಂಧಪಟ್ಟ ಪ್ರಸ್ತಾವನೆ ಸರ್ಕಾರದ ಮುಂದಿದ್ದು ಪರಿಶೀಲಿಸಿ ಅಂತಹ ಕ್ಷೇತ್ರಗಳಿಗೆ, ನ್ಯಾಯ ಒದಗಿಸತಕ್ಕಂಥ ವ್ಯವಸ್ಥೆ ಸರ್ಕಾರದ ಮುಂದಿದೆಯೇ ಎನ್ನುವುದು ನನ್ನ ಪ್ರಮುಖವಾದ ಪ್ರಶ್ನೆ. ಇದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರಿಸಬೇಕು.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರು ನಾವು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ . ಮಾನ್ಯ ಸದಸ್ಯರು ಉಳಿಯತಕ್ಕಂಥ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಅಭಿಪ್ರಾಯ ಪಟ್ಟಿದ್ದಾರೆ. ಉಳಿಯತಕ್ಕಂಥ ನೀರನ್ನು ಯಾವುದು ಒಣಭೂಮಿಯಿದೆ, ಆ ಒಣಭೂಮಿಗೆ ನೀರನ್ನು ಹಂಚುವುದಕ್ಕೆ ಸೂಕ್ತ ಯೋಜನೆಗಳನ್ನು ನಾವು – ನೀವು ಸೇರಿ ಮಾಡೋಣ.

ಶ್ರೀ ಬಿ. ಶಿವರಾಮು : ಈ ವಿಚಾರದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ನಾನು ಏಕೆ ಕೇಳಿದೆನೆಂದರೆ, ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದರ ಮೂಲಕ ನೀರು ಸಾಕಷ್ಟು ಉಳಿಯುತ್ತದೆ ಎಂದಾದ ಮೇಲೆ ಅದನ್ನು ಬೇರೆ ಕಡೆಗೆ ಡೈವರ್ಟ್ ಮಾಡಬೇಕಾದರ ಈಗಾಗಲೇ ಕೆಲಸ ಪ್ರಗತಿಯಲ್ಲಿರುವುದರಿಂದ ಸುಮ್ಮನೆ ಅನಾವಶ್ಯಕವಾಗಿ ಎರಡು ಸಾರಿ ಡೂಪ್ಲಿಕೇಷನ್ ಆಫ್ ವರ್ಕ್ ಮಾಡುವುದರ ಮೂಲಕ ಹಣ ವ್ಯಯವಾಗುತ್ತದೆ, ಅಥವಾ ಬೇರೆ ಕಡೆ ವರ್ಗ ಮಾಡುವುದರಿಂದ ಇಲ್ಲಿಯೂ ಹಣ ವ್ಯಯವಾಗುತ್ತಿದೆ. ಆ ದೃಷ್ಟಿಯಿಂದ ಸರ್ಕಾರ ಬೇಗ ಗಮನಹರಿಸಿ ಏತ ನೀರಾವರಿ ಯೋಜನೆ ಮಾಡುವುದರಿಂದ ಆಗುತ್ತದೆ. ಮತ್ತು ಯಗಚಿ ನದಿಯ ಕಾಮಗಾರಿ ಕೆಲಸಗಳ ಪ್ರಗತಿಯನ್ನು ಪರಿಶೀಲಿಸಿ ಬಹುಶಃ ಅದನ್ನು ನಿಲ್ಲಿಸಿ ಬೇರೆ ಕಡೆಗೆ ಮಂಜೂರು ಮಾಡಿದರೆ ಸರ್ಕಾರಕ್ಕೆ ಹಣವೂ ಉಳಿತಾಯವಾಗುವುದಲ್ಲದೆ, ಈ ಯೋಜನೆಯಿಂದ ಇತರ ಕಡೆಗೂ ಉಪಯೋಗವಾಗುತ್ತಿದೆ. ಆದುದರಿಂದ, ಈ ಕುರಿತು ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಕೃಷ್ಣ : ಈ ನೀರಾವರಿ ಯೋಜನೆಗಳನ್ನು ಕೈಗೊಳ್ಳುವಾಗ ಕೇವಲ ಇಂತಿಷ್ಟೇ ಕ್ಷೇತ್ರಗಳಿಗೆ ಎಂದು ಯೋಚನೆ ಮಾಡುವ ಬದಲು ಎಷ್ಟು ನೀರು ದೊರೆಯುತ್ತದೆಯೋ, ಅಷ್ಟು ನೀರನ್ನು ಕಡಿಮೆ ಹಣದಲ್ಲಿ ಯಾರಿಗೆ ಅತ್ಯಂತ ಅವಶ್ಯಕವಾಗಿ ಬೇಕಾಗುತ್ತದೆಯೋ ಅಂತಹವರಿಗೆ ಆ ನೀರನ್ನು ಹಂಚಿರತಕ್ಕಂಥ ವ್ಯವಸ್ಥೆ ಮಾಡಬೇಕೆಂಬುದು ಸರ್ಕಾರದ ನೀತಿಯಾಗಿದೆ. ಇದರಲ್ಲಿ ಎಕ್ಸ್‌ಪರ್ಟ್ ಏನಿದ್ದಾರೆ, ಅವರಿಂದ ಮಾತ್ರ ನಾವು ಮಾರ್ಗದರ್ಶನ ಪಡೆದು ನೀರು ಹೋಗದಿರುವ ಕಡೆಗೆ ಅಥವಾ

ನೀರು ತೆಗೆದುಕೊಂಡು ಹೋಗುವುದಕ್ಕೆ ಬಹಳ ಹಣ ಬೇಕಾಗಬಹುದೆಂದು ಅವರು ಅಭಿಪ್ರಾಯಪಡುವುದಾದರೆ ಅಲ್ಲಿ ಆಗುವುದಿಲ್ಲ. ಆದರೆ, ನೀರು ಉಳಿದು ಕಡಿಮೆ ಹಣದಲ್ಲಿ ಇಂತಿಂಥ ಪ್ರದೇಶಗಳಿಗೆ ನೀರನ್ನು ತೆಗೆದುಕೊಂಡು ಹೋಗಬಹುದೆಂದು ಹೇಳಿದರೆ ಅದರ ಬಗ್ಗೆ ಯೋಚನೆ ಮಾಡೋಣ.

ವಿಷಯ : ದೊಂಬರನಹಳ್ಳಿ ಕೆರೆಗೆ ಮಂಜೂರಾದ ಹಣ.

Q : 1716

ಶ್ರೀ ಎಸ್. ರುದ್ರಪ್ಪ (ತುರುವೆಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಂಬರನಹಳ್ಳಿ ಹೊಣಕೆರೆ ಹಿತ್ತಳೆಕೊಪ್ಪ ದ್ವಾರನಹಳ್ಳಿಗಳಿಗೆ ಕೆರೆಗಳು ಮಂಜೂರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಆ) ಹಾಗಿದ್ದಲ್ಲಿ, ಮಂಜೂರಾಗಿ ಎಷ್ಟು ವರ್ಷಗಳಾಯಿತು?
ಇ) ಇವುಗಳಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?
ಈ) ಹಾಗೂ ಯಾವಾಗ ಪೂರ್ತಿ ಮಾಡಲಾಗುವುದು?

ಡಾ॥ ಆರ್. ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.
ಆ) ಕೆರೆಯ ಹೆಸರು ಮಂಜೂರಾದ ವರ್ಷ ವೆಚ್ಚ ಲಕ್ಷ(ರೂ. ಗಳಲ್ಲಿ)

1.	ದೊಂಬರನಹಳ್ಳಿ ಕೆರೆ	83 - 84	3.11
2.	ಹೊಣಕೆರೆ	86 - 87	1.10
3.	ಹಿತ್ತಳೆಕೊಪ್ಪ ಕೆರೆ	84 - 85	5.49
4.	ದ್ವಾರನಹಳ್ಳಿ ಕೆರೆ	86 - 87	2.05

ಇ) ಈ ಕಾಮಗಾರಿಗಳನ್ನು ಇನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಚಿಸಿದೆ.

ಶ್ರೀ ಎಸ್. ರುದ್ರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿಗೆ ಸರ್ಕಾರ ನಾಲ್ಕು ಕೆರೆಗಳನ್ನು ಮಂಜೂರು ಮಾಡಿ ಸುಮಾರು ಹತ್ತು ವರ್ಷಗಳಾಗಿರಬಹುದು. ಮೊದಲನೆಯದಾಗಿ, 1983-84ರಲ್ಲಿ ಮಂಜೂರಾದ ದೊಂಬರನಹಳ್ಳಿ ಕೆರೆಗೆ ಇಲ್ಲಿಯತನಕ ಸರ್ಕಾರ 3 ಲಕ್ಷ 11 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೆ.
ಎರಡನೆಯದಾಗಿ, ಹೊಣಕೆರೆ 1986-87ರಲ್ಲಿ ಮಂಜೂರಾಗಿದ್ದು 1 ಲಕ್ಷ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮೂರನೆಯದಾಗಿ, 1984-85ರಲ್ಲಿ ಮಂಜೂರಾದ ಹಿತ್ತಳೆಕೊಪ್ಪ ಕೆರೆಗೆ 9 ವರ್ಷಗಳಲ್ಲಿ 5 ಲಕ್ಷ 49 ಸಾವಿರ